O.S .No. 97/2019
PW-1

ದಿನಾಂಕ: 15-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ**

ನೀವು 2019 ರಲ್ಲಿ ದಾವೆ ಹೂಡುವ ಕಾಲಕ್ಕೆ ನಿಮಗೆ 23 ವರ್ಷ ಎಂದು ಬರೆಸಿ ಹಾಕಿರುತ್ತೀರಿ ಎಂದರೆ ಸರಿ. ನೀವು 1995 ನೇ ಇಸವಿ ನಂತರ ಹುಟ್ಟಿರುತ್ತೀರಿ ಎಂದರೆ ಸರಿ. 1 ಮತ್ತು 9 ನೇ ಪ್ರತಿವಾದಿಗಳು ಸೇರಿ ನಿಮ್ಮ ಮದುವೆ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಪ್ರೀತಿಸಿ ಮದುವೆಯಾಗಿರುತ್ತೇನೆ. ದಾವೆ ಹೂಡುವ ಕಾಲಕ್ಕೆ ನಾನು ಪ್ರೀತಿಸಿ ಮದುವೆಯಾಗಿರುತ್ತೇನೆ, ನನಗೆ ಯಾರೂ ಮದುವೆ ಮಾಡಿಲ್ಲ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಿಮ್ಮ ಮುತ್ತಾತ ಮತ್ತು ಮುತ್ತಜ್ಜಿ 7 ಜನ ಮಕ್ಕಳು ಎಂದು ಬರೆಸಿರುತ್ತೀರಿ ಎಂದರೆ ಸರಿ. ದಾವಾ ತಪಶೀಲು ಆಸ್ತಿ ಸಂ.1, ನಿಮ್ಮ ಮುತ್ತಾತ ದಾಸಯ್ಯ ರವರಿಗೆ ಸೇರಿದ್ದು ಎಂದರೆ ಸರಿ. ನಿಮ್ಮ ಮುತ್ತಾತ ದಾಸಯ್ಯ ಹಾಗೂ ಅವರ ಹೆಂಡತಿ ದೇವಮ್ಮ ತೀರಿಕೊಂಡಿದ್ದಾರೆಂದರೆ ಸರಿ. ದಾಸಯ್ಯ ರವರ 7 ಜನ ಮಕ್ಕಳಿಗೆ ದಾವಾ ತಪಶೀಲು ಆಸ್ತಿ ಸಂ.1 ಇಂದಿನವರೆಗೂ ಭಾಗವಾಗಿಲ್ಲ ಎಂದರೆ ಸರಿ. ಸದರಿ ದಾವಾ ತಪಶೀಲು ಆಸ್ತಿ ಸಂ.1 ರಲ್ಲಿ ದಾಸಯ್ಯನ 7 ಜನ ಮಕ್ಕಳಿಗೆ ವಿಭಾಗವಾಗುವವರೆಗೂ 1 ನೇ ಪ್ರತಿವಾದಿಯ ಭಾಗ ಯಾವುದು ಎಂದು ಗುರುತಿಸಲಾಗುವುದಿಲ್ಲ ಎಂದರೆ ಸರಿ.

ದಾವಾ ತಪಶೀಲು ಆಸ್ತಿ ಸಂ.1 ರ ಜಮೀನು ಈಗಲೂ ದಾಸಯ್ಯನ ಹೆಂಡತಿ ದೇವಮ್ಮ ರವರ ಹೆಸರನಲ್ಲಿದೆ ಎಂದರೆ ಸರಿ. ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ತಪಶೀಲು ಆಸ್ತಿ ಸಂ.1 ರ ಸಂಬಂಧ ನಿಪಿ-1 ನ್ನು ಹಾಜರುಪಡಿಸಿರುತ್ತೀರಾ ಎಂದರೆ ಸರಿ.

3 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆಂದರೆ ಸರಿ. ಸದರಿಯವರಿಗೆ ಗಂಡ ಮತ್ತು ಮಕ್ಕಳು ಇದ್ದಾರೆಂದರೆ ಸರಿ. 3 ನೇ ಪ್ರತಿವಾದಿಯ ಗಂಡ ಮತ್ತು ಮಕ್ಕಳನ್ನು ಈ

ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ.

ಮದುವೆಯಾದ ನಂತರ 1 ನೇ ಪ್ರತಿವಾದಿ ಅವರ ಹೆಂಡತಿಯೊಂದಿಗೆ ದಾಸಯ್ಯನ ಕುಟುಂಬ ಬಿಟ್ಟು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ನಿಮ್ಮ ಅಜ್ಜಿ ಎಂದರೆ ಸರಿ. 2 ನೇ ಪ್ರತಿವಾದಿ ಹೆಸರು ಮುದ್ದಮ್ಮ ಎಂದರೆ ಸಾಕ್ಷಿ ತಾಯಿಮುದ್ದಮ್ಮ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯನ್ನು ದಾವೆಯಲ್ಲಿ ಸೇರಿಸುವ ಅವಶ್ಯಕತೆಯಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ತಾಯಿ ಎಂದು ಸೇರಿಸಿರುತ್ತೇನೆ ಎಂದು ಹೇಳುತ್ತಾರೆ. 12 ನೇ ಪ್ರತಿವಾದಿಯನ್ನು ದಾವೆಯಲ್ಲಿ ಸೇರಿಸುವ ಅವಶ್ಯಕತೆಯಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ಹೆಂಡತಿಯಾಗಿದ್ದರಿಂದ ಸೇರಿಸಿರುತ್ತೇನೆ ಎಂದು ಹೇಳುತ್ತಾರೆ. 2 ಮತ್ತು 12 ನೇ ಪ್ರತಿವಾದಿಗಳನ್ನು ದಾವೆಯಲ್ಲಿ ಅವಶ್ಯಕ ಪಕ್ಷಗಾರರಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ದಾಸಯ್ಯನ ಕುಟುಂಬದಿಂದ ಹೊರ ಬಂದ ನಂತರ ಕೂಲಿ ಮಾಡಿ ಜೀವನ ಮಾಡುತ್ತಿದ್ದರು ಎಂದರೆ ಸಾಕ್ಷಿ ದೇವಮ್ಮನ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಉಳಿದ 6 ಜನ ಮಕ್ಕಳು ದೇವಮ್ಮನ ಜಮೀನಿನಲ್ಲೇ ಉಳುಮೆ ಮಾಡುತ್ತಿದ್ದರಾ ಎಂದರೆ ಸಾಕ್ಷಿ 4 ಜನ ಗಂಡು ಮಕ್ಕಳು ಮಾತ್ರ ಅರ್ಧ ಎಕರೆ ಪಾಲು ಮಾಡಿಕೊಂಡು ಉಳುಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ದಾಸಯ್ಯನ 4 ಜನ ಮಕ್ಕಳು ತಮ್ಮ ಪಾಲಿನ ಅರ್ಧ ಎಕರೆ ಜಮೀನಿನಲ್ಲಿ ಏನು ಬೆಳೆ ಬೆಳೆಯುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.1 ಖುಷ್ಕಿ ಜಮೀನು ಎಂದರೆ ಸರಿ. ಸದರಿ ಜಮೀನು ಮಳೆಯಾಶ್ರಿತ ಜಮೀನು ಎಂದರೆ ಸಾಕ್ಷಿ ಆಗ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.1 ರಲ್ಲಿ ಮಳೆ ಬಂದರೆ ಮಾತ್ರ ರಾಗಿ ಬೆಳೆ ಬೆಳೆಯಲಾಗುತ್ತಿತ್ತು, ಇಲ್ಲದಿದ್ದರೆ ಇಲ್ಲ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಅವರ 3 ಜನ ಮಕ್ಕಳಿಗೆ ದಾವಾ ತಪಶೀಲು ಆಸ್ತಿ ಸಂ.1 ರಲ್ಲಿ ಬಂದಂತಹ ಆದಾಯ ಸಾಕಾಗುತ್ತಿರಲಿಲ್ಲ ಎಂದರೆ ಸರಿ. ನೀವು ಹೇಳಿದಂತೆ ಅರ್ಧ ಎಕರೆ ಜಮೀನನ್ನು ಹಂಚಿಕೊಂಡಿದ್ದರೂ ಸಹ ಅದರಲ್ಲಿ ಬರುತ್ತಿದ್ದ ಬೆಳೆ ಸಾಕಾಗುತ್ತಿರಲಿಲ್ಲ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿ ಕೂಲಿ ಮಾಡಿ ಜೀವನ

ಮಾಡುತ್ತಿದ್ದರು ಎಂದರೆ ಸಾಕ್ಷಿ ಕೂಲಿ ಮಾಡುತ್ತಿರಲಿಲ್ಲ, ವ್ಯವಸಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನೀವು 1995 ರ ನಂತರ ಹುಟ್ಟಿರುವುದರಿಂದ ನಿಮಗೆ ಅದರ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿ ಅನಧಿಕೃತವಾಗಿ ದಾವಾ ತಪಶೀಲು ಆಸ್ತಿ ಸಂ.2 ನ್ನು ಕಾಡು ಕಡೆದು, ವ್ಯವಸಾಯಕ್ಕೆ ಯೋಗ್ಯ ಮಾಡಿ, ಉಳುಮೆ ಮಾಡುತ್ತಿದ್ದರು ಎಂದು ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ದಿಃ12.06.1995 ರಂದು ಜನಿಸಿರುತ್ತೇನೆ. ನೀವು ಹುಟ್ಟಿದ 12 ದಿನಕ್ಕೆ ಸರ್ಕಾರದವರು 1 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ಸಂ.2 ನ್ನು ಸಾಗುವಳಿ ಚೀಟಿ ನೀಡಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆಯ ಮದುವೆಯಾಗುವ ಪೂರ್ವದಲ್ಲೇ 1 ನೇ ಪ್ರತಿವಾದಿ ದಾವಾ ತಪಶೀಲು ಆಸ್ತಿ ಸಂ.2 ಅನಧಿಕೃತವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.2 ವಾಸ್ತವವಾಗಿ 2 ಎಕರೆ 18 ಗುಂಟೆ ಮಾತ್ರ ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂ.2, 2 ಎಕರೆ 18 ಗುಂಟೆ ಜಮೀನು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.3 ನ್ನು 1 ನೇ ಪ್ರತಿವಾದಿ ಕೂಲಿಯಿಂದ ಬಂದಂತ ಆದಾಯದಿಂದ ಹಾಗೂ ದಾವಾ ತಪಶೀಲು ಆಸ್ತಿ ಸಂ.2 ರಿಂದ ಬಂದಂತಹ ಆದಾಯದಿಂದ ಖರೀದಿಸಿರುತ್ತಾರೆಂದರೆ ಸರಿ. ದಾವಾ ತಪಶೀಲು ಆಸ್ತಿ ಸಂ.1 ದಾಸಯ್ಯನ 7 ಜನ ಮಕ್ಕಳಿಗೂ ಭಾಗವಾಗದೇ ಇರುವುದರಿಂದ ಇಂದಿನವರೆಗೂ ವ್ಯವಸಾಯ ಮಾಡದೇ ಪಾಳು ಬಿದ್ದಿದೆ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ಅರುಣ ಕುಮಾರ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿ ಹಂಚಿಕೊಂಡ ಅರ್ಧ ಎಕರೆ ಜಮೀನನ್ನು 11 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ. ನಿಮ್ಮ ವಾದ ಪತ್ರದಲ್ಲಿ ಮುತ್ತಾತನ 4 ಜನ ಮಕ್ಕಳು ದಾವಾ ತಪಶೀಲು ಆಸ್ತಿ ಸಂ.1 ನ್ನು ಹಂಚಿಕೊಂಡಿದ್ದು, 1 ನೇ ಪ್ರತಿವಾದಿಯ ಹಿಸ್ಸೆಯ ಅರ್ಧ ಎಕರ ಜಮೀನನ್ನು 11 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆಂದು ಬರೆಸಿದ್ದೀರಾ ಎಂದರೆ

ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ಮುತ್ತಾತನ 4 ಜನ ಮಕ್ಕಳು ದಾವಾ ತಪಶೀಲು ಆಸ್ತಿ ಸಂ.1 ನ್ನು ಹಂಚಿಕೊಂಡಿದ್ದು, 1 ನೇ ಪ್ರತಿವಾದಿಯ ಹಿಸ್ಸೆಯ ಅರ್ಧ ಎಕರ ಜಮೀನನ್ನು 11 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆಂದು ತೋರಿಸಲು ದಾಖಲಾತಿ ಇದೆಯೇ ಅಥವಾ ನೋಡಿದವರು ಇದ್ದಾರೆಯೇ ಎಂದರೆ ಸಾಕ್ಷಿ ದಾಖಲಾತಿ ಇಲ್ಲ, ನಾನು ಮದುವೆ ಮುಂಚಿತವಾಗಿ ಹೋಗಿ ಅಲ್ಲೇ ಸ್ವಲ್ಪ ದಿನ ವಾಸ ಇದ್ದಾಗ ನೋಡಿದ್ದನ್ನು ಹೇಳಿದ್ದೇನೆ ಎಂದು ಹೇಳುತ್ತಾರೆ. ಈಗ ಯಾರು ಮಾಡುತ್ತಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ.

ದಾವಾ ತಪಶೀಲು ಆಸ್ತಿ ಸಂ.4 ನ್ನು 1 ನೇ ಪ್ರತಿವಾದಿ ಖರೀದಿಸಿದ ಜಮೀನು ಆಗಿರುತ್ತದೆ. 11 ನೇ ಪ್ರತಿವಾದಿಯ ಹೆಂಡತಿ ಹೆಸರು ಅನ್ನಪೂರ್ಣ. ಸರ್ಕಾರದಿಂದ ಅಂಬೆಡ್ಕರ್ ವಸತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರ ಸಹಾಯ ಮಾಡುತ್ತದೆಂದರೆ ಸರಿ. ದಾವಾ ತಪಶೀಲು ಆಸ್ತಿ ಸಂ.4 ರ ಚೆಕ್ಕುಬಂಧಿ ಪೂರ್ವಕ್ಕೆ: ಚಿಕ್ಕಹನುಮಯ್ಯರವರ ಮನೆ, ಪಶ್ಚಿಮಕ್ಕೆ: ಶಿವಣ್ಣ ರವರ ಮನೆ, ಉತ್ತರಕ್ಕೆ: ಮಾದಯ್ಯ ರವರ ಮನೆ ಮತ್ತು ದಕ್ಷಿಣಕ್ಕೆ: ರಸ್ತೆ. ನಿಮ್ಮ ವಾದ ಪತ್ರದಲ್ಲಿ ದಾವಾ ತಪಶೀಲು ಆಸ್ತಿ ಸಂ.4 ರ ಚೆಕ್ಕುಬಂಧಿಯ ಪೂರ್ವಕ್ಕೆ: ಚಿಕ್ಕಹನುಮಯ್ಯರವರ ಜಮೀನು, ಪಶ್ಚಿಮಕ್ಕೆ: ಶಿವಣ್ಣ ರವರ ಜಮೀನು, ಉತ್ತರಕ್ಕೆ: ಮಾದಯ್ಯ ರವರ ಜಮೀನು ಎಂದು ಬರೆಸಿದ್ದು, ಅದು ತಪ್ಪು ಎಂದರೆ ಸರಿ.

ದಾವಾ ತಪಶೀಲು ಆಸ್ತಿ ಸಂ.4 ರ ಪೈಕಿ 11 ನೇ ಪ್ರತಿವಾದಿಯ ಹೆಂಡತಿ ಅಂಬೆಡ್ಕರ್ ವಸತಿ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಫಲಾನುಭವಿಯಾಗಿದ್ದರು ಎಂದರೆ ಸರಿ. 11 ನೇ ಪ್ರತಿವಾದಿಯ ಹೆಂಡತಿ ದಾವಾ ತಪಶೀಲು ಆಸ್ತಿ ಸಂ.4 ರ ಪೈಕಿ 2 ಗುಂಟೆ ಜಮೀನಿನಲ್ಲಿ ಪೂರ್ವಕ್ಕೆ 1 ನೇ ಪ್ರತಿವಾದಿಯ ಉಳಿಕೆ ಜಮೀನು ಎಂದು ತೋರಿಸಿ ಅಂಬೆಡ್ಕರ್ ವಸತಿ ಯೋಜನೆಯಡಿ ಮನೆ ಕಟ್ಟಿಕೊಂಡಿರುತ್ತಾರೆಂದರೆ ಸರಿ. 11 ನೇ ಪ್ರತಿವಾದಿಯ ಹೆಂಡತಿಗೆ ಮನೆ ಕಟ್ಟಲು ರಾಜೀವ ಗಾಂಧಿ ವಸತಿ ಯೋಜನೆಯಡಿ 50 ಸಾವಿರ ರೂ.ಗಳ ಸಹಾಯ ಧನವನ್ನು ಸಾಲವಾಗಿ ನೀಡಲಾಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಸಾಲ ಇನ್ನೂ ತಿರುವಳಿಯಾಗಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ

ಎಂದು ಹೇಳುತ್ತಾರೆ. ದಾವೆ ಹೂಡುವ ಕಾಲಕ್ಕೆ 11 ನೇ ಪ್ರತಿವಾದಿಯ ಹೆಂಡತಿ ಮನೆ ಕಟ್ಟಿದ ವಿಚಾರ ಗೊತ್ತಿತ್ತು ಎಂದರೆ ಸರಿ. ಮನೆ ಕಟ್ಟಿದ ವಿಚಾರವನ್ನು ಉದ್ದೇಶಪೂರ್ವಕವಾಗಿ ವಾದ ಪತ್ರದಲ್ಲಿ ಮರೆಮಾಚಿದ್ದೀರಾ ಎಂದರೆ ಸರಿಯಲ್ಲ.

ದಾವಾ ತಪಶೀಲು ಆಸ್ತಿ ಸಂ.1 ರಲ್ಲಿ ದಾಸಯ್ಯನ 7 ಜನ ಮಕ್ಕಳಿಗೆ ಭಾಗವಾದರೆ, 1 ನೇ ಪ್ರತಿವಾದಿಯ ಹಿಸ್ಸೆಗೆ ಬರುವ ಜಮೀನಿನಲ್ಲಿ, ನಿಮ್ಮ ತಂದೆಗೆ ಬರುವ ¼ ಭಾಗದಲ್ಲಿ ನಿಮಗೆ 1/16 ಭಾಗ ಇದೆ ಎಂದರೆ ಸಾಕ್ಷಿ ಎಲ್ಲಾದರಲ್ಲೂ ಬರಬೇಕು ಎಂದು ಹೇಳುತ್ತಾರೆ. ನಿಮಗೆ ದಾವಾ ತಪಶೀಲು ಆಸ್ತಿ ಸಂ.1 ರಲ್ಲಿ 3 ಗುಂಟೆ ಜಮೀನಿಗೆ ಹಕ್ಕು ಇದ್ದು, ಇನ್ಯಾವ ಜಮೀನಿನಲ್ಲಿ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ಸಂ.2 ರಿಂದ 4, 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾದ್ದರಿಂದ, ಅದರಲ್ಲಿ ನಿಮಗೆ ಹಕ್ಕು ಇಲ್ಲ ಎಂದು ಹೇಳುತ್ತಾರೆ. ಅನ್ಯತಾ ಪಾಯಿದೆ ಹೊಂದಲು ಸುಳ್ಳು ದಾವೆ ಹೂಡಿದ್ದೀರಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.